***ಸಾಕ್ಷಿಯನ್ನು ದಿಃ 11.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.***

***ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದಃ–***

***ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ನಾನೇ ಪ್ರಮಾಣೀಕರಿಸಿದ ನನ್ನ ಶಪಥ ಪತ್ರದ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಹಾಗೂ ಅವುಗಳಲ್ಲಿರುವ ಸಹಿಗಳು ನನ್ನವೇ ಆಗಿವೆ. ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಲಾಗಿದ್ದು ಅವುಗಳನ್ನು ನಿಶಾನೆಯಾಗಿ ಗುರುತಿಸಲಾಯಿತು.***

| | |
|---|---|
| *ನಿಪಿ. 1* | *ಪ್ರಥಮ ವರ್ತಮಾನ ವರದಿ ಮತ್ತು ದೂರಿನ ದೃಢೀಕೃತ ನಕಲು* |
| *ನಿಪಿ.2* | *ಅಪಘಾತವಾದ ಸ್ಥಳದಲ್ಲಿ ತಯಾರಿಸಿದ ಮಹಜರು, ಫೋಟೋದ ದೃಢೀಕೃತ ನಕಲುಗಳನ್ನು ಒಟ್ಟಾಗಿ* |
| *ನಿಪಿ.3* | *ವಾಹನ ಅಮಾನತ್ತು ಪಂಚನಾಮೆಯ ದೃಢೀಕೃತ ನಕಲು* |
| *ನಿಪಿ.4* | *ಐಎಂವಿ ವರದಿಯ ದೃಢೀಕೃತ ನಕಲು* |
| *ನಿಪಿ.5* | *ಗಾಯದ ಪ್ರಮಾಣಪತ್ರದ ಮತ್ತು ಎಂ ಎಲ್ ಸಿ ದೃಢೀಕೃತ ನಕಲುಗಳನ್ನು ಒಟ್ಟು 3 ಪುಟಗಳನ್ನು ಒಟ್ಟಾಗಿ* |
| *ನಿಪಿ.6* | *ಅಂತಿಮ ವರದಿಯ ದೃಢೀಕೃತ ನಕಲು ಒಟ್ಟು 6 ಪುಟಗಳನ್ನು ಒಟ್ಟಾಗಿ* |
| *ನಿಪಿ.7* | *ವೈದ್ಯಕೀಯ ಚಿಕಿತ್ಸೆಯ 13 ಬಿಲ್ಲುಗಳು ಒಟ್ಟಾಗಿ* |
| *ನಿಪಿ.8* | *ಬಿಡುಗಡೆಯ ಸಾರಾಂಶ* |
| *ನಿಪಿ.9* | *ನೋಟರಿ ದೃಢೀಕೃತ ಅಧಾರ್ ಕಾರ್ಡು* |
| *ನಿಪಿ. 10* | *ನೋಟರಿ ದೃಢೀಕೃತ ಪಾನ್ ಕಾರ್ಡು* |

ನಿಪಿ. 11 ವ್ಯವಸ್ಥಾಪಕರು ದೃಢೀಕರಿಸಿದ ಬ್ಯಾಂಕ್ ಪಾಸ್ ಪುಸ್ತಕದ ಮೊದಲ ಪುಟ, ಎಂದು ಗುರ್ತಿಸಲಾಯಿತು.

ನಿಪಿ.9 ರಿಂದ 11ರ ಅಸಲು ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು, ನ್ಯಾಯಾಲಯ ಸ್ವತಃ ಪರಿಶೀಲನೆ ಮಾಡಿ ಮುಕ್ತ ನ್ಯಾಯಾಲಯದಲ್ಲಿ ಅರ್ಜಿದಾರರ ವಶಕ್ಕೆ ಹಿಂದಿರುಗಿಸಲಾಗಿರುತ್ತದೆ.

**ಪಾಟೀಸವಾಲುಃ 2ನೇ ಎದುರುದಾರರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).**

**ಸಾ.ಓ.ಹೇ.ಕೆ.ಸ.ಇ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**